**B**

SL. No. : YYY

ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]

**CCE RR**
**Revised & Un-Revised**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8
[ Total No. of Printed Pages : 8

**ಸಂಕೇತ ಸಂಖ್ಯೆ : 96-K**  **Code No. : 96-K**

# ವಿಷಯ : ಅರ್ಥಶಾಸ್ತ್ರ

# Subject : ECONOMICS

**( ಕನ್ನಡ ಭಾಷಾಂತರ / Kannada Version )**

**( ಹೊಸ ಪಠ್ಯಕ್ರಮ / New Syllabus )**

**( ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater )**

ದಿನಾಂಕ : 23. 06. 2018 ]  [ Date : 23. 06. 2018

ಸಮಯ : ಬೆಳಿಗ್ಗೆ 9-30 ರಿಂದ ಮಧ್ಯಾಹ್ನ 12-30 ರವರೆಗೆ ]  [ Time : 9-30 A.M. to 12-30 P.M.

ಗರಿಷ್ಠ ಅಂಕಗಳು : 80 ]  [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು 47 ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳನ್ನು ಹೊಂದಿದೆ.

2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.

3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.

4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.

5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ಕೊಡಲಾಗಿದೆ.

ಇಲ್ಲಿ ಕತ್ತರಿಸಿ
TEAR HERE TO OPEN THE QUESTION PAPER
ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ
Tear here

I. **ಈ ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** $10 \times 1 = 10$

1. 'ಒಂದು ರಾಷ್ಟ್ರವು ಬಡರಾಷ್ಟ್ರವಾಗಿರುವುದಕ್ಕೆ ಕಾರಣ ಬಡತನವಾಗಿದೆ' ಎಂದು ಹೇಳಿದವರು

   (A) ರ್‍ಯಾಗ್ನರ್ ನರ್ಕ್ಸ್

   (B) ಆ್ಯಡಂ ಸ್ಮಿತ್

   (C) ಆಲ್‌ಫ್ರೆಡ್ ಮಾರ್ಷಲ್

   (D) ಜೆ.ಎಂ. ಕೇನ್ಸ್

2. ಈ ಕೆಳಗಿನವುಗಳಲ್ಲಿ ಹೆಚ್ಚು ತಲಾದಾಯವನ್ನು ಹೊಂದಿರುವ ದೇಶ

   (A) ಭಾರತ

   (B) ಚೀನಾ

   (C) ಈಜಿಪ್ಟ್

   (D) ಅಮೆರಿಕಾ ( USA )

3. ಅತೀ ಹೆಚ್ಚು ಕಾರ್ಬನ್ ಅಂಶ ಹೊಂದಿರುವ ಕಲ್ಲಿದ್ದಲಿನ ವಿಧ

   (A) ಆಂಥ್ರಸೈಟ್

   (B) ಬಿಟುಮಿನಾಸ್

   (C) ಲಿಗ್ನೈಟ್

   (D) ಫೀಟ್

4. ವಿಶ್ವದಲ್ಲಿಯೇ ಮೊಟ್ಟ ಮೊದಲ ಬಾರಿಗೆ 'ಕುಟುಂಬ ಯೋಜನೆ'ಯನ್ನು ಜಾರಿಗೊಳಿಸಿದ ರಾಷ್ಟ್ರ

   (A) ಚೀನಾ

   (B) ಭಾರತ

   (C) ಬಾಂಗ್ಲಾದೇಶ

   (D) ಪಾಕಿಸ್ತಾನ

5. ಅತೀ ಕಡಿಮೆ ಜನಸಾಂದ್ರತೆಯನ್ನು ಹೊಂದಿರುವ ರಾಜ್ಯ

(A) ಅರುಣಚಲ ಪ್ರದೇಶ

(B) ನಾಗಾಲ್ಯಾಂಡ್

(C) ಹಿಮಾಚಲ ಪ್ರದೇಶ

(D) ಮಧ್ಯಪ್ರದೇಶ

6. ಕಿರಿದಾದ ಕೊಳವೆಗಳ ಮೂಲಕ ನೇರವಾಗಿ ಸಸ್ಯಗಳ ಬೇರುಗಳಿಗೆ ಜಿನುಗುವಂತೆ ನೀರು ಹಾಯಿಸುವುದೇ

(A) ತುಂತುರು ನೀರಾವರಿ

(B) ಬಾವಿ ನೀರಾವರಿ

(C) ಕಾಲುವೆ ನೀರಾವರಿ

(D) ಹನಿ ನೀರಾವರಿ

7. ಕೃಷಿ ಹಣಕಾಸಿನ ಅತ್ಯುನ್ನತ ಬ್ಯಾಂಕು

(A) ನಬಾರ್ಡ್

(B) ಭೂ ಅಭಿವೃದ್ಧಿ ಬ್ಯಾಂಕು

(C) ಸಹಕಾರಿ ಬ್ಯಾಂಕು

(D) ಪ್ರಾದೇಶಿಕ ಗ್ರಾಮೀಣ ಬ್ಯಾಂಕು

8. 'ಕೈಗಾರಿಕೀಕರಣಗೊಳಿಸಿ ಇಲ್ಲವೇ ವಿನಾಶವಾಗಿ' ಎಂದು ಹೇಳಿದವರು

(A) ಸರ್ ಎಂ. ವಿಶ್ವೇಶ್ವರಯ್ಯ

(B) ಮಹಾತ್ಮ ಗಾಂಧೀಜಿ

(C) ಅಮರ್ತ್ಯ ಸೇನ್

(D) ದಾದಾಬಾಯಿ ನವರೋಜಿ

9. ಕನಿಷ್ಠ ಕೂಲಿ ಕಾಯ್ದೆಯನ್ನು ಜಾರಿಗೆ ತಂದ ವರ್ಷ

(A) 1978

(B) 1968

(C) 1958

(D) 1948

10. ಕರ್ನಾಟಕದಲ್ಲಿರುವ ರೈಲ್ವೆ ವಲಯ

(A) ನೈರುತ್ಯ ರೈಲ್ವೆ

(B) ಈಶಾನ್ಯ ರೈಲ್ವೆ

(C) ದಕ್ಷಿಣ ರೈಲ್ವೆ

(D) ಪೂರ್ವ ರೈಲ್ವೆ

II. **ಈ ಕೆಳಗಿನ ಪ್ರಶ್ನೆಗಳಿಗೆ *ಒಂದೊಂದು* ವಾಕ್ಯದಲ್ಲಿ ಉತ್ತರ ಬರೆಯಿರಿ :** 14 × 1 = 14

11. ಭಾರತದ ಒಟ್ಟು ಬ್ಯಾಂಕುಗಳಲ್ಲಿ ಗ್ರಾಮೀಣ ಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶೇಕಡಾ ಭಾಗವೆಷ್ಟು ?

12. 2011 ರ ಗಣತಿಯ ಪ್ರಕಾರ ಭಾರತದಲ್ಲಿ ಬಡತನ ಪ್ರಮಾಣ ಎಷ್ಟು ?

13. ಸೌರಶಕ್ತಿ ಎಂದರೇನು ?

14. ಗಣಿಗಾರಿಕೆ ಎಂದರೇನು ?

15. ಕಪ್ಪು ವಜ್ರ ಎಂದು ಪ್ರಸಿದ್ಧಿ ಹೊಂದಿರುವುದು ಯಾವುದು ?

16. ಮಾನವ ಸಂಪನ್ಮೂಲ ಎಂದರೇನು ?

17. ನೀರಾವರಿ ಎಂದರೇನು ?

18. ಜಿಲ್ಲಾ ಕೈಗಾರಿಕಾ ಕೇಂದ್ರಗಳನ್ನು ಏಕೆ ಸ್ಥಾಪಿಸಲಾಗಿದೆ ?

19. ಗ್ರಾಮೀಣ ಕಾರ್ಮಿಕರು ಎಂದರೆ ಯಾರು ?

20. ಬಡತನ ರೇಖೆಯನ್ನು ಹೇಗೆ ನಿರ್ಧರಿಸಲಾಗುತ್ತದೆ ?

21. ಫ್ಯಾಕ್ಸ್ ಎಂದರೇನು ?

22. ವಾಯುಸಾರಿಗೆ ಎಂದರೇನು ?

23. ಮಿಂಚಂಚೆ (ಇ–ಮೇಲ್) ಎಂದರೇನು ?

24. 'ಪ್ರಗತಿಯ ಯಂತ್ರ' ಎಂದು ಪರಿಗಣಿಸಲ್ಪಟ್ಟಿರುವುದು ಯಾವುದು ?

III. **ಈ ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರಿಸಿ :** $15 \times 2 = 30$

25. ಆರ್ಥಿಕ ಅಭಿವೃದ್ಧಿ ಎಂದರೇನು ?

26. ನವೀಕರಿಸಬಹುದಾದ ಮತ್ತು ನವೀಕರಿಸಲಾಗದ ಸ್ವಾಭಾವಿಕ ಸಂಪನ್ಮೂಲಗಳ ವ್ಯತ್ಯಾಸಗಳನ್ನು ತಿಳಿಸಿ.

27. ಈ ಕೆಳಗಿನವುಗಳಿಗೆ ಉದಾಹರಣೆ ನೀಡಿ :

a) ಸರ್ವವ್ಯಾಪಿ ಅಥವಾ ನಿರಂತರ ಸಂಪನ್ಮೂಲಗಳು

b) ಸ್ಥಳ ನಿರ್ಬಂಧಿತ ಸಂಪನ್ಮೂಲಗಳು

28. ಕೈಗಾರಿಕೆಗಳು ಜನಸಾಂದ್ರತೆಗೆ ಹೇಗೆ ಕಾರಣವಾಗಿದೆ ?

29. ಜನಸಂಖ್ಯಾ ಹೆಚ್ಚಳಕ್ಕೆ ಭೌಗೋಳಿಕಾಂಶ ಹೇಗೆ ಕಾರಣವಾಗಿದೆ ?

30. ಭಾರತದಲ್ಲಿ ಭೂ ಸುಧಾರಣೆಗಳ ವಿಫಲತೆಗೆ ಕಾರಣಗಳೇನು ?

31. ಹಸಿರು ಕ್ರಾಂತಿಯಿಂದ ಪರಿಸರ ಮಾಲಿನ್ಯ ಹೇಗೆ ಉಂಟಾಗುತ್ತದೆ ?

32. ತಕ್ಕಾವಿ ಸಾಲಗಳ ಅನುಕೂಲಗಳೇನು ?

33. ಕೃಷಿ ಹಣಕಾಸಿನ ಪ್ರಕಾರಗಳನ್ನು ಹೆಸರಿಸಿ.

34. ಭಾರತದಲ್ಲಿ ಕೈಗಾರಿಕಾಭಿವೃದ್ಧಿಯ ಮಹತ್ವವೇನು ?

35. ಕೃಷಿ ಕಾರ್ಮಿಕರ ಸ್ಥಿತಿಗತಿಗಳನ್ನು ಸುಧಾರಿಸಲು ಕೈಗೊಂಡಿರುವ ಕ್ರಮಗಳೇನು ?

36. ಬಡತನದ ವಿಧಗಳನ್ನು ಹೆಸರಿಸಿ.

37. ಸ್ವರ್ಣಜಯಂತಿ ಗ್ರಾಮ್ ಸ್ವರೋಜ್‌ಗಾರ್ ಯೋಜನೆಯ ಗುರಿಗಳೇನು ?

38. ಸಾಮಾಜಿಕ ಮೂಲಭೂತ ಸೌಕರ್ಯಗಳು ಯಾವುವು ?

39. ಭಾರತವು ಆಮದು ಮಾಡಿಕೊಳ್ಳುವ ಪ್ರಮುಖ ಸರಕುಗಳನ್ನು ಹೆಸರಿಸಿ.

IV. **ಈ ಕೆಳಗಿನ ಪ್ರಶ್ನೆಗಳಿಗೆ ಐದು ಅಥವಾ ಆರು ವಾಕ್ಯಗಳಲ್ಲಿ ಉತ್ತರಿಸಿ :** $6 \times 3 = 18$

40. ಅಭಿವೃದ್ಧಿ ಹೊಂದಿದ ದೇಶಗಳ ಪ್ರಮುಖ ಗುಣಲಕ್ಷಣಗಳೇನು ?

***ಅಥವಾ***

ಅನಭಿವೃದ್ಧಿ ದೇಶಗಳ ಆರ್ಥಿಕತೆಯ ಪ್ರಮುಖ ಗುಣಲಕ್ಷಣಗಳೇನು ?

41. ಭಾರತದ ಜನಸಂಖ್ಯೆಯ ಹೆಚ್ಚಳಕ್ಕೆ ಕಾರಣವಾಗಿರುವ ಸಾಮಾಜಿಕ ವ್ಯವಸ್ಥೆಗಳಾವುವು ?

***ಅಥವಾ***

1976 ರ ರಾಷ್ಟ್ರೀಯ ಜನಸಂಖ್ಯಾ ನೀತಿಯ ಪ್ರಮುಖ ಗುಣಲಕ್ಷಣಗಳಾವುವು ?

42. ಕಾರ್ಮಿಕ ಸಂಘಗಳ ಪ್ರಮುಖ ಉದ್ದೇಶಗಳೇನು ?

***ಅಥವಾ***

ಕೃಷಿ ಕಾರ್ಮಿಕರ ಗುಣಲಕ್ಷಣಗಳೇನು ?

43. ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಂಪರ್ಕದ ಪಾತ್ರವೇನು ?

***ಅಥವಾ***

ಒಂದು ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಸಾರಿಗೆ ವ್ಯವಸ್ಥೆಯ ಪಾತ್ರವೇನು ?

44. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಮುಖ ಕಾರ್ಯಗಳೇನು ?

**ಅಥವಾ**

ಭಾರತೀಯ ರಿಸರ್ವ್ ಬ್ಯಾಂಕಿನ ತರಬೇತಿ ಸಂಸ್ಥೆಗಳಾವುವು ?

45. ಆಂತರಿಕ ವ್ಯಾಪಾರ ಮತ್ತು ಅಂತಾರಾಷ್ಟ್ರೀಯ ವ್ಯಾಪಾರಗಳ ನಡುವಿನ ವ್ಯತ್ಯಾಸಗಳೇನು ?

**ಅಥವಾ**

ವಿದೇಶಿ ವ್ಯಾಪಾರದ ವ್ಯವಸ್ಥೆ ಮತ್ತು ಅವಶ್ಯಕತೆಯನ್ನು ಬರೆಯಿರಿ.

V. **ಈ ಕೆಳಗಿನ ಪ್ರಶ್ನೆಗಳಿಗೆ *ಎಂಟು* ಅಥವಾ *ಹತ್ತು* ವಾಕ್ಯಗಳಲ್ಲಿ ಉತ್ತರಿಸಿ :** $2 \times 4 = 8$

46. ಮಣ್ಣಿನ ಸವೆತದಿಂದಾಗುವ ದುಷ್ಪರಿಣಾಮಗಳೇನು ?

47. ಸಣ್ಣ ಕೈಗಾರಿಕೆಗಳ ಸಮಸ್ಯೆಗಳಾವುವು ?